ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 733
2. ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ: : 17.9.2021
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದ ವಿಕೇಂದ್ರೀಕರಣ ಪದ್ಧತಿಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಿವಿಧ ಹುದ್ದೆಗಳ ಅಧಿಕಾರಿಗಳು/ಸಿಬ್ಬಂದಿಗಳ ಹುದ್ದೆಗಳನ್ನು (Staffing pattern) ಸೃಜಿಸಲಾಗಿದ್ದು, ಈ ಮೂರು ಹಂತಕ್ಕೂ ಈವರೆವಿಗೂ ಗ್ರೂಫ್-ಸಿ ಮತ್ತು ಗ್ರೂಫ್-ಡಿ ಹುದ್ದೆಗಳಿಗೆ ವೃಂದ ಮತ್ತು ನಿಯಮ ಇಲ್ಲದಿರಲು ಕಾರಣವೇನು;	ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆ.ಎಸ್.ಎಸ್. 2016, ದಿನಾಂಕ:20.7.2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು-2020 ನ್ನು ರಚಿಸುವ ಮೂಲಕ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್‌ಗಳ ವಿವಿಧ ವೃಂದಗಳ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ. ಗ್ರಾಮ ಪಂಚಾಯತ್‌ಗಳಲ್ಲಿ ಮಂಜೂರಾಗಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಗ್ರೇಡ್-1, ಕಾರ್ಯದರ್ಶಿ ಗ್ರೇಡ್- 2 ಮತ್ತು ದ್ವಿತಿಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ, ಅಧಿಸೂಚನೆ ಸಂಖ್ಯೆ: ಗ್ರಾಅಪ 306 ಕೆ.ಎ.ಎಸ್.ಎಸ್ 2005, ದಿನಾಂಕ:20.1.2011 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳ-2008, ನಂತರ ತಿದ್ದುಪಡಿ ನಿಯಮಗಳು -2011 ಮತ್ತು 2012 ನ್ನು ರಚಿಸಲಾಗಿದೆ.
ಆ	ಪ್ರತಿ ಹಂತದ ವ್ಯವಸ್ಥೆಯಡಿ (Staffing pattern) ಸೃಜಿಸಲಾದ ಗ್ರೂಫ್- ಸಿ ಮತ್ತು ಡಿ ಹುದ್ದೆಗಳು ಎಷ್ಟು;	ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳು.

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು
1	ಅಧೀಕ್ಷಕ	268
2	ಪ್ರಥಮ ದರ್ಜೆ ಲೆಕ್ಕ	703(ನಿಯೋಜನೆ)

<table>
<tr>
<td></td>
<td></td>
<td>
<table>
<tr><td></td><td>ಸಹಾಯಕ</td><td></td></tr>
<tr><td>3</td><td>ಯೋಜನಾ ಸಹಾಯಕ</td><td>226 (ನಿಯೋಜನೆ)</td></tr>
<tr><td>4</td><td>ಪ್ರಥಮ ದರ್ಜೆ ಸಹಾಯಕ</td><td>724</td></tr>
<tr><td>5</td><td>ಶೀಘ್ರಲಿಪಿಗಾರರು</td><td>413</td></tr>
<tr><td>6</td><td>ದ್ವಿತಿಯ ದರ್ಜೆ ಸಹಾಯಕ</td><td>903</td></tr>
<tr><td>7</td><td>ಬೆರಳಚ್ಚುಗಾರರು</td><td>730 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td>8</td><td>ವಾಹನ ಚಾಲಕ</td><td>523 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td>9</td><td>ದಲಾಯತ್</td><td>1213 (ಹೊರಗುತ್ತಿಗೆ ಮೇಲೆ ನೇಮಕ)</td></tr>
<tr><td colspan="3">ಗ್ರಾಮ ಪಂಚಾಯತ್‌ಗಳು</td></tr>
<tr><td>10</td><td>ಪಂಚಾಯತ್ ಅಭಿವೃದ್ಧಿ ಅಧಿಕಾರಿ</td><td>6021</td></tr>
<tr><td>11</td><td>ಕಾರ್ಯದರ್ಶಿ(ಗ್ರೇಡ್–1)</td><td>2177</td></tr>
<tr><td>12</td><td>ಕಾರ್ಯದರ್ಶಿ (ಗ್ರೇಡ್–2)</td><td>3844</td></tr>
<tr><td>13</td><td>ದ್ವಿತಿಯ ದರ್ಜೆ ಲೆಕ್ಕ ಸಹಾಯಕ</td><td>2579</td></tr>
</table>
</td>
</tr>
<tr>
<td>ಇ</td>
<td>ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಅಡಿ ಭರ್ತಿ ಮಾಡಲಾಗುವುದೇ;</td>
<td>ಖಾಲಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳುನಸಾರ ನೇರ ನೇಮಕಾತಿ ಹಾಗೂ ಮುಂಬಡ್ತಿಗೆ ನಿಗಧಿಪಡಿಸಿರುವ ಪ್ರಮಾಣದಲ್ಲಿ ನೇಮಕ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತದೆ.</td>
</tr>
<tr>
<td>ಈ</td>
<td>ಪ್ರಸ್ತುತ ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ಇಲಾಖೆಯ ಮೂಲ ನೌಕರರೇ /ಬೇರೆ ಬೇರೆ ಇಲಾಖೆಯ ವಿಲೀನವಾದ/ಅನುಕಂಪದ ಆಧಾರದ ನೌಕರರು ಇದ್ದಲ್ಲಿ ಅವರ ಪದೋನ್ನತಿ, ಪಿಂಚಣಿ ಇತರ</td>
<td><u>ಮುಂಬಡ್ತಿಗೆ ಸಂಬಂಧಿಸಿದಂತೆ:–</u> ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆ.ಎಸ್.ಎಸ್. 2016, ದಿನಾಂಕ:20.7.2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು–2020 ನ್ನು ರಚಿಸಿದ್ದು, ಸದರಿ ನಿಯಮಗಳನುಸಾರ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ</td>
</tr>
</table>

	ಉಪದಾನಗಳ ಸ್ವರೂಪವೇನು.	ಮುಂಬಡ್ತಿ ಪಡೆಯಲು ಅರ್ಹರಿರುತ್ತಾರೆ. **ಪಿಂಚಣಿ, ನಿವೃತ್ತಿ ಉಪದಾನಕ್ಕೆ ಸಂಬಂಧಿಸಿದಂತೆ:-** ದಿನಾಂಕ:01.4.2006ಕ್ಕೂ ಪೂರ್ವದಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಲ್ಲಿ ವಿವಿಧ ಮೂಲಗಳಿಂದ ಸಕ್ರಮಗೊಂಡ/ ಅನುಕಂಪದ ಆಧಾರದ ಮೇಲೆ ನೇಮಕ ಹೊಂದಿದ್ದ ನೌಕರರಿಗೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಉದ್ದೇಶಕ್ಕೆ ನೌಕರರ ವಿವರಗಳೊಂದಿಗೆ ದಿನಾಂಕ:15.3.2017 ರಂದು ಸರ್ಕಾರವು ಮೂರು ಆದೇಶಗಳನ್ನು ಹೊರಡಿಸಿ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆ. ದಿನಾಂಕ:01.4.2006 ರ ನಂತರ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿದ್ದು, ಸದರಿ ದಿನಾಂಕದ ನಂತರ ನೇಮಕಗೊಂಡ ನೌಕರರುಗಳಿಗೆ ಹೊಸ ಪಿಂಚಣಿ ಯೋಜನೆಯಂತೆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಗ್ರಾಅಪ 186 ಕೆ.ಎಸ್.ಎಸ್ 2021(ಇ)

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ

PMKSY-WDC ಯೋಜನೆಯಡಿ ಜಿಲ್ಲಾವಾರು ಅನುಮೋದನೆಗೊಂಡ ಯೋಜನೆಗಳು, ಮುಕ್ತಾಯಗೊಂಡ ಯೋಜನೆಗಳು ಹಾಗೂ ಮುಕ್ತಾಯ ಹಂತದಲ್ಲಿರುವ ಯೋಜನೆಗಳ ವಿವರಗಳು

ಕ್ರ ಸಂ	ಜಿಲ್ಲೆ	ಒಟ್ಟು ಅನುಮೋದನೆ ನೀಡಲಾದ ಯೋಜನೆಗಳ ಸಂಖ್ಯೆ (ಬ್ಯಾಚ್–1 ರಿಂದ 6)	ಮುಕ್ತಾಯಗೊಂಡ ಯೋಜನೆಗಳ ಸಂಖ್ಯೆ	ಪ್ರಸ್ತುತ ಮುಕ್ತಾಯದ ಹಂತದಲ್ಲಿರುವ ಯೋಜನೆಗಳ ಸಂಖ್ಯೆ
1	ಬಾಗಲಕೋಟೆ	15	11	1
2	ಬೆಂಗಳೂರು	11	7	2
3	ಬೆಳಗಾವಿ	31	20	3
4	ಬಳ್ಳಾರಿ	29	19	3
5	ಬೀದರ್	20	12	3
6	ವಿಜಯಪುರ	27	15	2
7	ಚಾಮರಾಜನಗರ	16	10	2
8	ಚಿಕ್ಕಬಳ್ಳಾಪುರ	19	13	2
9	ಚಿಕ್ಕಮಗಳೂರು	13	9	1
10	ಚಿತ್ರದುರ್ಗ	28	17	3
11	ದಕ್ಷಿಣ ಕನ್ನಡ	15	10	0
12	ದಾವಣಗೆರೆ	13	9	2
13	ಧಾರವಾಡ	18	13	2
14	ಗದಗ	20	14	0
15	ಕಲಬುರಗಿ	33	17	5
16	ಹಾಸನ	23	14	4
17	ಹಾವೇರಿ	21	17	0
18	ಕೊಡಗು	6	3	1
19	ಕೋಲಾರ	19	14	2
20	ಕೊಪ್ಪಳ	18	12	3
21	ಮಂಡ್ಯ	18	13	1
22	ಮೈಸೂರು	21	11	4
23	ರಾಯಚೂರು	20	14	0
24	ರಾಮನಗರ	12	8	2
25	ಶಿವಮೊಗ್ಗ	25	19	2
26	ತುಮಕೂರು	40	24	4
27	ಉಡುಪಿ	9	5	1
28	ಉತ್ತರಕನ್ನಡ	18	13	2
29	ಯಾದಗಿರಿ	13	7	2
ಒಟ್ಟು		**571**	**370**	**59**

ಆಯುಕ್ತರು 13/7

ಜಲಾನಯನ ಅಭಿವೃದ್ಧಿ ಇಲಾಖೆ